ಹೀಗಾಗಿ ಆಗ ವಿಶ್ವಕೋಶಗಳ ಹಲವು ಸಂಪುಟಗಳು ಪ್ರಕಟವಾದವು. ಶಾಸನ ವಿಭಾಗದಲ್ಲಿಯೂ ನುರಿತವರೇ ಇದ್ದರು. ಪುನರ್ ಪರಿಷ್ಕರಣದ ಸಂಪುಟಗಳನ್ನು ಪ್ರಕಟಿಸುವ ಮುನ್ನ ಕ್ಷೇತ್ರಕಾರ್ಯ ಮಾಡುತ್ತಿದ್ದರು. ಭಾಷಾಂತರ ವಿಭಾಗದಿಂದ ಅನೇಕ ವಿಜ್ಞಾನ ಗ್ರಂಥಗಳು ಕನ್ನಡಕ್ಕೆ ಬಂದವು. 'ನಮ್ಮ ಸಂಸ್ಥೆಯ ಕಾರ್ಯ ಇದು' ಎಂಬ ಅಭಿಮಾನ ಎಲ್ಲರಲ್ಲಿತ್ತು. ಪ್ರಧಾನ ಗುರುದತ್ತ ಅವರು ಈ ವಿಭಾಗದ ಮುಖ್ಯಸ್ಥರಾಗಿದ್ದರು. ಆ ಸಂದರ್ಭದಲ್ಲಿ ಎಲ್ಲಾ ವಿಭಾಗಗಳಿಂದ ಪ್ರತಿವರ್ಷ ಹಲವಾರು ಗ್ರಂಥಗಳು ಪ್ರಕಟವಾದ ಕಾರಣ ಅಧ್ಯಯನ ಸಂಸ್ಥೆಯ ಬಗ್ಗೆ ಸಾರ್ವಜನಿಕರಿಗೂ ಗೌರವವಿದ್ದಿತ್ತು. ಇತರ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಕ್ಕೆ ಇದು ಮಾದರಿಯಾಗಿತ್ತು.

**◆ ನೀವು ಗ್ರಂಥ ಸಂಪಾದನೆ ಮೂಲಕ ಕಟ್ಟುವ ಇತಿಹಾಸ ಯಾವ ಬಗೆಯದು ಎಂದುಕೊಂಡಿದ್ದೀರಿ? ಯಾಕೆಂದರೆ ನಿಮ್ಮ ಕೆಲಸಗಳನ್ನು ಆಧರಿಸಿ ಇತಿಹಾಸ ನಿಂತಿರುತ್ತದೆ. ಇಲ್ಲಿ ಸಂಪಾದಕರ ನಿಲುವು ಯಾವುದಿರಬೇಕು? ಈ ಕೆಲಸ ಎಷ್ಟು ವಸ್ತುನಿಷ್ಠವಾಗಿರಬೇಕು?**

ಇಲ್ಲಿ ಸಂಪಾದಕರ ನಿಲುವು ವಸ್ತುನಿಷ್ಠವಾಗಿರಬೇಕು. ನಮ್ಮ ಪಠ್ಯದಲ್ಲಿ ದೊರೆಯುವ ಮಾಹಿತಿಗೂ ಇತಿಹಾಸದ ನಿರೂಪಣೆಗೂ ವ್ಯತ್ಯಾಸವಿದ್ದರೆ ನಾವು ನಮ್ಮ ಪ್ರಸ್ತಾವನೆಯ ಭಾಗದಲ್ಲಿ ಚರ್ಚಿಸುತ್ತೇವೆ. ಪ್ರಾಚೀನ ಸಾಹಿತ್ಯಕ್ಕೆ ಧರ್ಮಕೂಡ ಪ್ರೇರಣೆಯಾಗಿರುತ್ತದೆ. ಕೆಲವು ಕವಿಗಳು ತಮ್ಮ ಧರ್ಮವನ್ನು ಉತ್ಕರ್ಷಿಸುವ ಸಲುವಾಗಿ ಅನ್ಯಧರ್ಮವನ್ನು ವಿಡಂಬಿಸುತ್ತಾರೆ, ನಿಂದಿಸುತ್ತಾರೆ. ಅಂತಹ ಸಂದರ್ಭದಲ್ಲಿ ಸಂಪಾದಕ ಕವಿಯ ಪರವಾಗಿ ವಕಾಲತ್ತು ಮಾಡದೆ ಒರೆಗೆ ಹಚ್ಚಬೇಕಾಗುತ್ತದೆ.

**◆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ದೀರ್ಘಕಾಲ ಸೇವೆ ಮಾಡಿದ ನೀವು ಸಂಸ್ಥೆಯ ಕುರಿತು ಭಾವನಾತ್ಮಕ ನಂಟು ಇರಿಸಿಕೊಂಡಿದ್ದೀರಿ. ಅದರ ಬಗ್ಗೆ ಹೇಗೆನಿಸುತ್ತದೆ?**

ಸಹಜವಾಗಿ ನಾವು ಕೆಲಸ ಮಾಡುವ ಸಂಸ್ಥೆಯ ಮೇಲೆ ಒಂದು ಭಾವನಾತ್ಮಕ ನಂಟು ಬೆಳೆದು ಬರುತ್ತದೆ. ನನ್ನ ವೃತ್ತಿ ಬದುಕಿನ ಪೂರ್ಣಾವಧಿಯನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕಳೆದಿದ್ದೇನೆ. ನಾನು ಬರೆದ 'ಗ್ರಂಥ ಸಂಪಾದನ ಸಂಕಥನ'ವನ್ನು ನನಗೆ ಸರಸ್ವತಿ ಸ್ವರೂಪವಾಗಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರಕ್ಕೆ ಅರ್ಪಿಸಿದ್ದೇನೆ.

ನಾನು ಅಧ್ಯಯನ ಸಂಸ್ಥೆ ಸೇರಿದ್ದು ಅದರ ವೈಭವದ ದಿನಗಳಲ್ಲಿ. ಸುವರ್ಣಕಾಲದಲ್ಲಿ. ಎಂತೆಂತಹ ವಿದ್ವಾಂಸರು ಇದ್ದರೆಂಬುದನ್ನು ನೆನೆದುಕೊಂಡರೆ ಹೃದಯ ತುಂಬಿ ಬರುತ್ತದೆ. ನಮ್ಮ ಹಸ್ತಪ್ರತಿ ಭಂಡಾರ ಅದೆಷ್ಟು ಚೆಂದವಾಗಿತ್ತೆಂದರೆ ಕನ್ನಡದ ಅಪೂರ್ವ ಹಸ್ತಪ್ರತಿಗಳನ್ನೊಳಗೊಂಡ ಆಲಯವಾಗಿತ್ತು. ನಮ್ಮಂತಹ ಗ್ರಂಥ ಸಂಪಾದಕರಿಗೆ ಆಕರಗ್ರಂಥಗಳಿಲ್ಲದೆ ಕೆಲಸ ಮಾಡಲಾಗುವುದಿಲ್ಲ. ಹಸ್ತಪ್ರತಿಗಳೇ ನಮ್ಮ ಮೂಲ ಆಕರ. ನಮ್ಮ ಆಸಕ್ತಿಯನ್ನು ಸೆಳೆಯುವ ಅಮೂಲ್ಯ ಹಸ್ತಪ್ರತಿಗಳು, ಪೂರಕ ಗ್ರಂಥಾಲಯ, ಮೇಧಾವಿ ವಿದ್ವಾಂಸರು ನನ್ನನ್ನು ಕಟ್ಟಿಬೆಳೆಸಿದರು. ಅಧ್ಯಯನ ಸಂಸ್ಥೆಯಲ್ಲಿ ನನ್ನ ವಿದ್ಯಾಗುರುಗಳಿಲ್ಲದಿದ್ದರೂ ಎಲ್ಲರೂ ಗುರುಸದೃಶರೆ ಆಗಿದ್ದಾರೆ. ನಮ್ಮ ಹಸ್ತಪ್ರತಿ ಭಂಡಾರದಲ್ಲಿದ್ದ ಕೆಲವು ಗ್ರಂಥಗಳು ಬೇರೆಡೆ ಸಿಗುವ ಸಂಭವವೇ ಇರಲಿಲ್ಲ. ಆ ಕಾರಣಕ್ಕಾಗಿಯೆ ನಮ್ಮ ಸಂಸ್ಥೆಯ ಹಸ್ತಪ್ರತಿ ಭಂಡಾರ ಕುರಿತು ನಾನೊಂದು ಲೇಖನ ಬರೆದಿದ್ದೆ. ಕಹಿಯನ್ನು ಅಲ್ಲಿಯೇ ಬಿಟ್ಟು ಅಧ್ಯಯನ ಸಂಸ್ಥೆಯ ಮಧುರ ನೆನಪುಗಳನ್ನು ಇರಿಸಿಕೊಂಡಿದ್ದೇನೆ.

**◆ ನೀವು ಅತಿ ಹೆಚ್ಚು ಗ್ರಂಥಗಳನ್ನು ಸಂಪಾದಿಸಿದ ಸಂಪಾದಕಿ. ಅದಲ್ಲದೆ ನಿಮ್ಮಷ್ಟು ವಿಸ್ತೃತವಾಗಿ, ದೀರ್ಘಕಾಲ ಈ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಹೆಣ್ಣುಮಕ್ಕಳು ಎಲ್ಲಾದರೂ ಇದ್ದಾರೆಯೆ?**